ಶ್ರೀ ಜೆ.ಹೆಚ್. ಪಟೇಲ್ : ಯಾರೇ ಇರಲಿ. ಇದರಲ್ಲಿ ನಿಮ್ಮವರು, ನಮ್ಮವರು ಎಂದು ಅಲ್ಲ. ಶಾಸಕರು ಮತ್ತು ಅಧಾಕಾರಿಗಳು, ಗೌರವವನ್ನು ಪರಸ್ಪರ ಕೊಟ್ಟು ತೆಗೆದುಕೊಳ್ಳುವುದು. ಆ ತರಹ ಅಧಿಕಾರಿಗಳು ಏನಾದರೂ ಮಿಸ್ ಬಿಹೇವ್ ಮಾಡಿದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸನ್ಮಾನ್ಯ ಶಾಸಕರು ನಿಯಮ 19 ಅಡಿಯಲ್ಲಿ ಕೊಟ್ಟಿದ್ದ ಒಂದೋಂದು ಸೂಚನೆಯನ್ನು ಹಿಂದಕ್ಕೆ ಪಡೆದುಕೊಂಡಿರುವುದರಿಂದ ಈ ವಿಷಯವನ್ನು ಇಲ್ಲಿಗೇ ಮುಕ್ತಾಯಮಾಡಿ ಮುಂದಿನ ವಿಷಯಕ್ಕೆ ಹೋಗೋಣ..

ಗಮನ ಸೆಳೆಯುವ ಸೂಚನೆಗಳು

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ) : ಬಾಂಬೆ ಚಲನಚಿತ್ರದ ಪ್ರದರ್ಶನವನ್ನು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ನಿಷೇಧ ಮಾಡಿರುವ ಬಗ್ಗೆ ಗೃಹ ಮಂತ್ರಿಗಳ ಗಮನ ಸೆಳೆಯುತ್ತೇನೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : "ಬಾಂಬೆ" ಚಲನಚಿತ್ರವು ಈ ರಾಜ್ಯದ ಕೆಲವು ಚಿತ್ರಮಂದಿರಗಳಲ್ಲಿ ಪ್ರದರ್ಶನಲಾಗುತ್ತಿದೆ. ಈ ಚಲನಚಿತ್ರದಲ್ಲಿ ಕೆಲವು ಸನ್ನಿವೇಶಗಳಲ್ಲಿ ಮತೀಯ ಗಲಭೆಗಳನ್ನು ಪ್ರಚೋದಿಸುವ ಅಂಶಗಳೊನ್ನೊಳಗೊಂಡಿದೆ ಎಂದು ಸರ್ಕಾರಕ್ಕೆ ದೂರುಗಳು ಬಂದಿದ್ದವು. ಕೆಲವು ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸರ್ಕಾರದಿಂದ ಆದೇಶವನ್ನು ಕೇಳಿದ್ದರು. ಈ ಚಲನಚಿತ್ರವನ್ನು ನಾನೇ ಸ್ವತಃ ಇತರ ಅಧಿಕಾರಿಗಳೊಂದಿಗೆ ವೀಕ್ಷಿಸಿದ್ದೇನೆ. ಈ ಚಿತ್ರವನ್ನು ಮೂಲತಃ ತಮಿಳು ಭಾಷೆಯಲ್ಲಿ ತಯಾರಿಸಿದ್ದು, ಅದನ್ನು ಹಿಂದಿ ಮತ್ತು ತೆಲುಗು ಭಾಷೆಗಳಿಗೆ ಡಬ್ ಮಾಡಲಾಗಿದೆ. ಚಲನಚಿತ್ರದ ಕಥೆ ಮತ್ತು ಉದ್ದೇಶಗಳು ಪ್ರಶಂಸನೀಯ ಆಗಿವೆ. ಆದರೆ ಚಿತ್ರದಲ್ಲಿರುವ ಕೆಲವು ಸನ್ನಿವೇಶಗಳನ್ನು ಕಿಡಿಗೇಡಿಗಳು ದುರುಪಯೋಗಪಡಿಸಿಕೊಂಡು ಗಲಭೆಗಳಿಗೆ ಅಸ್ಪದ ಕೊಡಬಹುದಂತಾಗಿದೆ.

ಸಾರ್ವಜನಿಕರಿಂದ ಈ ಕೋರಿಕೆ ಬರುವ ಮೊದಲೆ ಬೆಂಗಳೂರು ನಗರದಲ್ಲಿ ಈಗಾಗಲೇ ಪ್ರದರ್ಶನವಾಗುತ್ತಿದ್ದು ಮತ್ತು ಯಾವುದೇ ಗಲಭೆಗಳು ಆಗಲಿಲ್ಲ. ಇತರ ಜಿಲ್ಲೆಗಳಲ್ಲಿ ಇನ್ನೂ ಮೂರನೆ ಹಂತದ ಚುನಾವಣೆಯಾಗಬೇಕಾಗಿದ್ದುದರಿಂದ (ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಪಂಚಾಯತ್) ಸಂಬಂಧಪಟ್ಟ ಜಿಲ್ಲಾ ದಂಡಾಧಿಕಾರಿಗಳಿಗೆ ಈ ಚಿತ್ರವನ್ನು ಅವರೆ ಸ್ವತಃ ವೀಕ್ಷಿಸಿ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಪ್ರಚೋದನಾತ್ಮಕ ಸನ್ನಿವೇಶಗಳನ್ನು ತೆಗೆದುಹಾಕಬೇಕೆಂದು ಆದೇಶ ನೀಡಲಾಗಿದೆ. ಅದರ ಪ್ರಕಾರ ಜಿಲ್ಲಾ ದಂಡಾಧಿಕಾರಿಗಳು, ನಗರ ಆಯುಕ್ತರು, ರಾಯಚೂರು, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾಂ ನಗರಗಳಲ್ಲಿ ಸದ್ಯಕ್ಕೆ ನಿಷೇಧಿಸಿರುತ್ತಾರೆ. ಇತರ ನಗರಗಳಲ್ಲಿ ಈ ಚಿತ್ರವು ಪ್ರದರ್ಶನವಾಗುತ್ತಿದೆ. ಈ ಬಗ್ಗೆ ಸ್ಥಳೀಯ ಪೊಲೀಸರು ಮುಂಜಾಗ್ರತೆ ಕ್ರಮಗಳನ್ನೂ ಈಗಾಗಲೇ ಕೈಗೊಂಡಿದ್ದಾರೆ. ಯಾವುದೇ ಅರಿಹತಕರ ಘಟನೆ ಅಥವಾ ಗಲಭೆ ನಡೆದಿರುವುದಿಲ್ಲ. ಪರಿಸ್ಥಿತಿಯನ್ನು ನೋಡಿಕೊಂಡು ನಿಷೇಧಿಸುವ ಅಧಿಕಾರ ಆಯಾಯ ಜಿಲ್ಲಾಧಿಕಾರಿಗಳಿಗೆ ಇರುತ್ತದೆ, ಎಂಬುದನ್ನು ತಿಳಿಸಬಯಸುತ್ತೇನೆ.

11.40 ಎ.ಎಂ

+ ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ ನಾನು ಚಿತ್ರವನ್ನು ನೋಡಿದ್ದೇನೆ, ಅದರಲ್ಲಿ ಕೆಲವು ಪ್ರಶಂಸನೀಯವಾದ ಅಂಶಗಳಿವೆಯೆಂದು ಹೇಳಿದ್ದಾರೆ. ಅವರು ಚಿತ್ರವನ್ನು ನೋಡಿದರೆ ಯಾವಾಗ ನೋಡಿದರು? ಅದರಲ್ಲಿ ಪ್ರಶಂಸನೀಯವಾದ ಅಂಶಗಳು ಯಾವುವು?

ಮತ್ತೆ ಅದರಲ್ಲಿ ಕೆಲವು ಸನ್ನಿವೇಶಗಳನ್ನು ತಿಳಿಗೇಡಿಗಳು ದುರುಪಯೋಗಪಡಿಸಿಕೊಂಡು ಗಲಭೆಗಳಿಗೆ ಅಸ್ಪದವಾಗಬಹುದೆಂದು ಹೇಳಿದ್ದಾರೆ. ನಾನು ಅದಕ್ಕೆ ಸ್ಪಷ್ಟವಾದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಇದೇ ಸಂದರ್ಭದಲ್ಲಿ ತಮಗೆ ಗೊತ್ತಿದೆ, ಕರ್ನಾಟಕ ರಾಜ್ಯದ ರಾಜಧಾನಿಯಾಗಿರತಕ್ಕ ಬೆಂಗಳೂರು ನಗರದಲ್ಲಿ ಕೆಲವು ಚಿತ್ರಗಳು ಬಿಡುಗಡೆ ಯಾದಾಗ ಹಲವಾರು ಗಲಭೆಗಳು ಆಗಿವೆ. ಅಂದಮಾತ್ರಕ್ಕೆ ಆ ಚಿತ್ರವನ್ನು ನಿಷೇಧ ಮಾಡತಕ್ಕದ್ದು ಸರಿಯಲ್ಲ. ಈ ಮೂರು ಅಂಶಗಳಿಗೆ ನಾನು ಸ್ಪಷ್ಟವಾದ ಉತ್ತರವನ್ನು ಸರ್ಕಾರದಿಂದ ಬಯಸುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಪ್ರಶಂಸನೀಯವಾದುದು ಅಂದರೆ ಹಿಂದು ಮುಸ್ಲಿಮ್ ಕೋಮು ಸೌಹಾರ್ದತೆಯಿಂದಾಗಿ ಈವೊಂದು ಚಲನಚಿತ್ರ ಚೆನ್ನಾಗಿದೆಯೆನ್ನತಕ್ಕ ಮಾತನ್ನು ಹೇಳಿದ್ದೇನೆ. ಯಾವ ಸನ್ನಿವೇಶ ಎನ್ನುವುದನ್ನು ಈಗ ಬಾಬ್ರಿ ಮಸೀದಿಯನ್ನು ಸಂಪೂರ್ಣವಾಗಿ ಉರುಳಿಸತಕ್ಕ ಸನ್ನಿವೇಶ ಅದರಲ್ಲಿ ಬರುತ್ತದೆ. ಬಹಳ ಪ್ರಚೋಜನೆಯಾಗುವ ರೀತಿಯಲ್ಲಿ ಮನಸ್ಸಿನ ಮೇಲೆ ಕೆಲವು ವರ್ಗದ ಜನಗಳ ಮನಸ್ಸಿನ ಮೇಲೆ ಆಘಾತವಾಗುವ ರೀತಿಯಲ್ಲಿ ಅದನ್ನು ತೋರಿಸಿದ್ದಾರೆ. ಮತ್ತೆ ಹೆಣ್ಣು ಮಕ್ಕಳ ಮಾನ ಅಪಹರಣ ಮಾಡತಕ್ಕ ಸನ್ನಿವೇಶ ಇದರಲ್ಲಿ ಬರುತ್ತದೆ. ಅದನ್ನು ತೆಗೆದುಹಾಕಬೇಕೆನ್ನುವ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಬೆಂಗಳೂರು ನಗರದಲ್ಲಿ ಇಂತಹ ಸಿನಿಮಾಗಳು ಬಂದಾಗ ಗಲಭೆಗಳು ಆಗಿರತಕ್ಕುದ್ದು ಹಿಂದೆ ಆಗಿರತಕ್ಕುದ್ದು ಮುಂದೆ ಆಗಬಹುದು ನನಗೆ ಗೊತ್ತಿಲ್ಲ ಅದು. ಆದರೆ ಇವತ್ತು ಗಲಭೆಗಳನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಕಾರಣದಿಂದ ಈ ಸಿನಿಮಾವನ್ನು ನಾವು ನಿಷೇಧಿಸಬೇಕೆಂದು ಹೇಳಿಲ್ಲ. ಇದರ ಉದ್ದೇಶ ಚೆನ್ನಾಗಿದೆ. ಇದು ಸಾಮಾನ್ಯ ಜನರು ನಿಷ್ಪಕ್ಷಪಾತವಾದ ಮನಸ್ಸಿನಿಂದ ನೋಡಿದಾಗ, ಯಾವುದೇ ಪ್ರಿಜ್ಯುಡಿಸ್ ಇಟ್ಟುಕೊಳ್ಳದೆ ನೋಡಿದರೆ ನಿಜವಾಗಲೂ ಬಹಳ ಒಳ್ಳೆಯ ಸಿನಿಮಾ. ನಾನು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಇವತ್ತು ಹೇಳುತ್ತಿದ್ದೇನೆ, ಕಾನೂನನ್ನು ಸಂರಕ್ಷಣೆ ಮಾಡುವ ದೃಷ್ಟಿಯಿಂದ ಕೆಲವು ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಲಿಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆಯನ್ನು ಸರ್ಕಾರದಿಂದ ಕೊಟ್ಟಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಈ ಚಲನಚಿತ್ರದಲ್ಲಿ ಯಾವ ಸನ್ನಿವೇಶ ಪ್ರಚೋಜನಾಕಾರಿ ಯಾವುದು ಇಲ್ಲವೆನ್ನತಕ್ಕದ್ದನ್ನು ನೋಡಿ ಸೆನ್ಸಾರ್‌ಬೋರ್ಡ್‌ನವರು ಸರ್ಟಿಫಿಕೇಟ್ ಕೊಟ್ಟು ರಿಲೀಸ್ ಮಾಡಿರತಕ್ಕ ಅಂಶ ಬಹುಶಃ ಸರ್ಕಾರಕ್ಕೆ ಗೊತ್ತಿದೆ. ಸೆನ್ಸಾರ್ ಬೋರ್ಡ್‌ನವರು ಚಿತ್ರವನ್ನು ರಿಲೀಸ್ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಮೇಲೆ ಅದರಲ್ಲಿರತಕ್ಕ ಅಂಶಗಳನ್ನು ಮತ್ತೆ ತೆಗೆಯಬೇಕೆಂದು ಹೇಳತಕ್ಕ ಅನುಮತಿಯನ್ನು ಕೊಟ್ಟಮೇಲೆ ಅದರಲ್ಲಿರತಕ್ಕ ಅಂಶಗಳನ್ನು ಮತ್ತ ತೆಗೆಯಬೇಕೆಂದು ಹೇಳತಕ್ಕ ಅಧಿಕಾರ ಬೇರೆ ಯಾರಿಗೂ ಇರುವುದಿಲ್ಲವೆಂದು ನನಗೆ ಕಾನೂನು ಪ್ರಕಾರ ಗೊತ್ತಿದೆ. ಎರಡನೆಯ ಅಂಶ ಇಡೀ ಚಿತ್ರ ಇವತ್ತು ನಮ್ಮ ದೇಶದ ಬೆಳವಣಿಗೆಗೆ ಬಹಳ ಅವಶ್ಯಕತೆಯಿದೆ. ಕೋಮು ಸೌಹಾರ್ದತೆಯನ್ನು ಸಾರತಕ್ಕ ಒಂದು ಪರಿಣಾಮಕಾರಿಯಾಗಿರತಕ್ಕ ವಿಚಾರ. ಅದರ ಜೊತೆಗೆ ಇವತ್ತು ಈ ಕೋಮು ಸೌಹಾರ್ದತೆಯನ್ನು ಕೆಡಿಸತಕ್ಕ ಎರಡು ಮೂಲಭೂತವಾದಿಗಳು, ಬಹುಸಂಖ್ಯಾತ ಮೂಲಭೂತವಾದಿಗಳು, ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳನ್ನು ಇದರಲ್ಲಿ ಎಕ್ಸ್‌ಪೋಸ್ ಮಾಡಿ ಇವತ್ತು ನಮ್ಮ ದೇಶಕ್ಕೆ ಏನು ಬೇಕಾಗಿದೆ ಎನ್ನತಕ್ಕ ಒಂದು ಸ್ಪಷ್ಟವಾದ ಮೆಸೇಜ್ ಈ ಚಿತ್ರದಲ್ಲಿದೆ. ಅಂತಹ ಒಂದು ಚಿತ್ರವನ್ನು ನೋಡತಕ್ಕ ಅವಕಾಶವನ್ನು ಕೆಲವು ವಿಭಾಗದ ಜನರಿಗೆ ತಪ್ಪಿಸತಕ್ಕ ವಿಚಾರ ಅದು ಸಂವಿಧಾನಬದ್ಧವಾಗಿ ಈ ದೇಶದ ಜನರಿಗೆ ಕೊಟ್ಟಿರತಕ್ಕ ಹಕ್ಕಿನ ಉಲ್ಲಂಘನೆಯಾಗುತ್ತದೆ. ಕಾನೂನು

ದೃಷ್ಟಿಯಿಂದ ನಾವು ಈ ಕ್ರಮ ತೆಗೆದುಕೊಂಡಿದ್ದೇವೆನ್ನುವುದು ಅಸಮರ್ಥನೀಯ. ಯಾರಾದರೂ ಕಾನೂನಿನಗೆ ವ್ಯತಿರಿಕ್ತವಾಗಿ ನಡೆಯತಕ್ಕ ಸನ್ನಿವೇಶಗಳು ಬಂದಾಗ, ಯಾವುದೋ ಒಂದು ಹೋಟೆಲ್‌ನಲ್ಲಿ ಊಟ ಮಾಡುವಾಗ ನಾಲ್ಕು ಜನ ತಿಳಿಗೇಡಿಗಳು ನೀವು ಊಟ ಮಾಡಬೇಡಿಯೆಂದು ಹೇಳಿದರೆ ಜನಗಳು ಊಟ ಮಾಡುವುದನ್ನು ನಿಷೇಧ ಮಾಡುತ್ತೀರಾ? ಆದರೆ ಪ್ರಶ್ನೆ ಏನೆಂದರೆ ಇವತ್ತು ಮೂಲಭೂತವಾದಿ ಶಕ್ತಿಗಳಿಗೆ ಮಣೆಯತಕ್ಕ ಸೂಚನೆ ಕಂಡುಬರುತ್ತಿದೆ. ಕೋಮು ಸೌಹಾರ್ದತೆಯನ್ನು ಬೆಳೆಸತಕ್ಕ ಜಾತೀಯ ಮೌಲ್ಯಗಳು ಅದರ ಬಗ್ಗೆ ನಂಬಿಕೆ ಇರತಕ್ಕ ಯಾರಾದರೂ ಕೂಡ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಚಿತ್ರದ ಮೇಲೆ ಹಾಕಿರತಕ್ಕ ನಿಷೇಧವನ್ನು ತಪ್ಪಿಸಬೇಕು. ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿರತಕ್ಕುದು ಸರಿಯಲ್ಲ. ಏಕೆಂದರೆ ಜಿಲ್ಲಾಧಿಕಾರಿಗಳಿಗೆ ಮತ್ತು ಪೊಲೀಸ್ ವರಿಷ್ಠಾಧಿಕಾರಗಳು ಅವರ ಮನೋಭಾವ ಹೇಗಿರುತ್ತದೆಂಬುದು ತಮಗೆ ಸ್ಪಷ್ಟವಾಗಿ ಗೊತ್ತಿದೆ. ಸೆನ್ಸಾರ್ ಬೋರ್ಡ್‌ನವರು ಸರ್ಟಿಫಿಕೇಟ್ ಕೊಟ್ಟು ಚಿತ್ರವನ್ನು ರಿಲೀಸ್ ಮಾಡಿದ ಮೇಲೆ ಅದನ್ನು ನಿಯಂತ್ರಣ ಮಾಡತಕ್ಕ ಅಧಿಕಾರ ಯಾರಿಗೂ ಇಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇನೆ. ಸೆನ್ಸಾರ್ ಬೋರ್ಡ್‌ನವರು ಸರ್ಟಿಫಿಕೇಟ್ ಕೊಟ್ಟು ಚಿತ್ರವನ್ನು ರಿಲೀಸ್ ಮಾಡಿದ ಮೇಲೆ ಅದನ್ನು ನಿಷೇದಿಸತಕ್ಕ ಉದ್ದೇಶ ಸರ್ಕಾರಕ್ಕೆ ಇಲ್ಲ. ಕೋಮುಸೌಹಾರ್ದತೆಯನ್ನು ಎತ್ತಿಹಿಡಿಯುವುದಕ್ಕೆ ಈ ಸರ್ಕಾರ ಎಲಲಾ ರೀತಿಯ ಕಾರ್ಯಕ್ರಮಗಳಿಗೆ ಪ್ರೋತ್ಸಾಹವನ್ನು ಕೊಡುತ್ತದೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಯಾವ ಮೂಲಭೂತ ವಾದಿಗಳಿಗೂ ಸರ್ಕಾರ ಮಣೆಯುವುದಿಲ್ಲ. ಇಷ್ಟೇ ಹೇಳುತ್ತೇನೆ, ಚುನಾವಣೆ ಇತ್ತು ಹಿಂದು ಮುಸ್ಲಿಮ್ ಗಲಾಟೆಗೆ ಕಾರಣವಾಗಬಹುದು ಎನ್ನುವ ದೃಷ್ಟಿಯಿಂದ ಶಾಂತಿ ಕಾಪಾಡುವ ದೃಷ್ಟಿಯಿಂದ ಜಿಲ್ಲಾಧಿಕಾರಿಗಳಿಗೆ ನಾವು ಹೇಳಿದ್ದೇವೆ. ನೋಡಿ, ಆ ಸಿನಿಮಾದಲ್ಲಿ ಆ ರೀತಿ ಇದ್ದರೆ ಅದನ್ನು ಸ್ವಲ್ಪ ದಿವಸ ರದ್ದುಮಾಡಿಯೆಂದು ಹೇಳಿರುವುದನ್ನು ಬಿಟ್ಟರೆ ಬೇರೆ ಯಾವ ಪ್ರಶ್ನೆ ಬರುವುದಿಲ್ಲ. ಇಂತಹ ಒಂದು ಕಾರ್ಯಕ್ರಮಗಳನ್ನು ಸರ್ಕಾರ ಸ್ವಾಗತ ಮಾಡುತ್ತದೆ. ಮಾನ್ಯ ಸದಸ್ಯರಿಗೆ ನಾನು ಮತ್ತೊಮ್ಮೆ ಭರವಸೆಯನ್ನು ಕೊಡುತ್ತಿದ್ದೇನೆ, ಈ ಸರ್ಕಾರಕ್ಕೆ ಸ್ಪಷ್ಟವಾದ ಉದ್ದೇಶವಿದೆ, ಅದನ್ನು ಬ್ಯಾನ್ ಮಾಡಬೇಕೆನ್ನುವ ದೃಷ್ಟಿಯಿದಲ್ಲ, ಬರೀ ಲಾ ಅಂಡ್ ಆರ್ಡರ್ ದೃಷ್ಟಿಯಿಂದ ಮಾಡಿದ್ದೇವೆ.

ಅಧ್ಯಕ್ಷರು : ಪ್ರದರ್ಶನ ರದ್ದಾಗಿದೆ, ಚಿತ್ರ ನಿಷೇಧವಾಗಿಲ್ಲ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ರಾಯಚೂರು, ಧಾರವಾಡ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಪ್ರದರ್ಶನ ನಿಷೇಧವಾಗಿದೆ. ಸಿನಿಮಾ ನಿಷೇಧ ಮಾಡತಕ್ಕ ಅಧಿಕಾರ ಇವರಿಗೆ ಇಲ್ಲ. ಪ್ರದರ್ಶನವನ್ನು ರದ್ದುಮಾಡಿರತಕ್ಕದ್ದು ಮತ್ತು ಇವರು ಕೊಟ್ಟಿರತಕ್ಕ ಕಾರಣ ಕೇವಲ ಕಾನೂನು ದೃಷ್ಟಿಯಿಂದ ಅಷ್ಟೆ. ಚುನಾವಣೆಯ ದೃಷ್ಟಿಯಿಂದ ಪ್ರದರ್ಶನವನ್ನು ರದ್ದುಮಾಡಿದ್ದೇವೆಂದು ಹೇಳತಕ್ಕದ್ದು ಸರ್ವತಾ ಸಮರ್ಥನೀಯವಾದಂಥ ವಿಷಯ ಅಲ್ಲ. ಹಾಗಾದರೆ ಇದನ್ನು ಓಟಿಗೋಸ್ಕರ ನೀವು ರದ್ದು ಮಾಡಿದ್ದೀರಾ? ಅವರು ಇವರು ಓಟು ಬರುತ್ತದೆಂದು ರದ್ದು ಮಾಡುವ ಅಂಶ ನಿಮಗೆ ಬಂತೇ? ಈ ರೀತಿಯ ಅಭಿಪ್ರಾಯ ಸರ್ಕಾರಕ್ಕೆ ಬರಬಾರದು. ತಕ್ಷಣ ರದ್ದುಪಡಿಸಿರತಕ್ಕ ಆಜ್ಞೆಯನ್ನು ವಾಪಸ್ಸು ಪಡೆಯಬೇಕೆಂದು ನಾನು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಓಟು ತೆಗೆದುಕೊಳ್ಳುವ ದೃಷ್ಟಿಯಿಂದ ಮಾಡಿರತಕ್ಕದ್ದಲ್ಲ. ಒಂದು ದಿನ ಮುಂಚಿತವಾಗಿ

ಮಾಡಿರತಕ್ಕದ್ದು. 13, 15, 18ನೇ ತಾರೀಖು ಚುನಾವಣೆಯಾಯಿತು. ನಾವು ನಿಷೇಧ ಮಾಡಿರತಕ್ಕದ್ದು 17ನೇ ತಾರೀಖು. ಲಾ ಅಂಡ್ ಆರ್ಡರ್ ಪಾಯಿಂಟ್‌ನಿಂದ ಮಾಡಿದ್ದೇವೆ.

ಅಧ್ಯಕ್ಷರು : ಮ್ಯಾಟರ್ ಈಸ್ ಕ್ಲೋಸ್ಡ್.

(ii) ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ತೊಂದರೆಯಾಗಿರುವ ಬಗ್ಗೆ ಅದರಲ್ಲೂ ವಿಶೇಷವಾಗಿ ಚಾಮರಾಜನಗರ ತಾಲ್ಲೂಕಿನಲ್ಲಿ ಆಗಿರತಕ್ಕ ವಿಶೇಷ ಪರಿಸ್ಥಿತಿಯ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿ) : ನವೆಂಬರ್ 94 ರಿಂದ ರಾಜ್ಯದ ವಿದ್ಯುತ್ ಬೇಡಿಕೆಯು ಏಕಪ್ರಕಾರವಾಗಿ ಹೆಚ್ಚುತ್ತಲ್ಲಿದ್ದು, ಈ ತಿಂಗಳಿನಲ್ಲಿ, ದಿನವಹಿ ವಿದ್ಯುತ್ ಬಳಕೆಯ ಪ್ರಮಾಣ 66 ದಶಲಕ್ಷ ಯೂನಿಟ್‌ಗಳಷ್ಟು ಗರಿಷ್ಠ ಪ್ರಮಾಣವನ್ನು ಮುಟ್ಟಿತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ ವಿದ್ಯುತ್ ಬಳಕೆಯ ಪ್ರಮಾಣ 59 ದಶಲಕ್ಷ ಯೂನಿಟ್‌ನಷ್ಟು ಮಾತ್ರ ಇದ್ದಿತ್ತು. ಪೀಕ್ ಲೋಡ್ ಸಹ ಈಗ 3243 ಮೆ.ವ್ಯಾ. ನ್ನು ಮುಟ್ಟಿದ್ದು ಕಳೆದ ವರ್ಷ ಇದು ಕೇವಲ 2919 ಮೆ.ವ್ಯಾಟ್‌ನಷ್ಟು ಮಾತ್ರ ಆಗಿದ್ದಿತ್ತು.

ಲಭ್ಯವಿರುವ ವಿದ್ಯುತ್ ಉತ್ಪಾದನೆ ಪ್ರಮಾಣ ಸೀಮಿತವಾಗಿದ್ದರೂ ಸಹ, ದಕ್ಷಿಣ ವಲಯದ ಎಲ್ಲಾ ರಾಜ್ಯಗಳಲ್ಲಿ ಕಳೆದ ವಾರಗಳಲ್ಲಿ ವಿದ್ಯುತ್‌ಬಳಕೆಯ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಹೆಚ್ಚಳಗೊಂಡಿದೆ. ಇದಕ್ಕೆ ಮುಖ್ಯ ಕಾರಣ ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ ವಿದ್ಯುತ್‌ನ್ನು ಬಳಸುತ್ತಿರುವ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಬಹಳ ಹೆಚ್ಚಳಗೊಂಡಿರುವುದು. ಇದರ ಪರಿಣಾಮವಾಗಿ ದಕ್ಷಿಣ ವಲಯದ ಗ್ರಿಡ್ ವ್ಯವಸ್ಥೆಯು ಬಹಳ ಕಳವಳಕಾರಿ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಸೋಮನಹಳ್ಳಿ 400 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ಸ್ವೀಕೃತವಾಗುತ್ತಿರುವ ವಿದ್ಯುತ್ತಿನ ವೋಲ್ಟೇಜ್ ಪೀಕ್ ವೇಳೆಗಳಲ್ಲಿ 400 ಕೆವಿ ಮಟ್ಟದಲ್ಲಿ ಇರಬೇಕಾದ ವೋಲ್ಟೇಜ್ 285 ರಿಂದ 300 ಕೆವೆಯಷ್ಟು ಕಡಿಮೆಗೊಳ್ಳುತ್ತಿದೆ. ಸೋಮನಹಳ್ಳಿಯಲ್ಲಿ ಕಡಿಮೆ ವೋಲ್ಟೇಜ್‌ನಲ್ಲಿ ವಿದ್ಯುತ್ ಸ್ವೀಕೃತವಾಗುತ್ತಿರುವುದರಿಂದ ಬೆಂಗಳೂರು, ಕೋಲಾರ, ತುಮಕೂರು ಮತ್ತು ಮೈಸೂರುಗಳ ವಿದ್ಯುತ್ ಗ್ರಾಹಕರು ಬಹಳ ತೊಂದರೆಗೆ ಒಳಪಟ್ಟಿದ್ದಾರೆ.

ದಕ್ಷಿಣ ಗ್ರಿಡ್ ವ್ಯವಸ್ಥೆಯಲ್ಲಿನ ಕಡಿಮೆ ವೋಲ್ಟೇಜ್ ಮತ್ತು ಕಡಿಮೆ ಫ್ರಿಕ್ವೆನ್ಸಿಯಿಂದಾಗಿ ಈ ತಿಂಗಳಿನಲ್ಲಿ ಮಾರ್ಚ್ 16ರಿಂದ ಮಾರ್ಚ್ 19ರ 5 ದಿವಸಗಳ ಅವಧಿಯಲ್ಲಿ ಮೂರು ಬಾರಿ ಗ್ರಿಡ್‌ನ ಕುಸಿತ ಉಂಟಾಯಿತು. ಇದರಿಂದಾಗಿ ರಾಜ್ಯದಲ್ಲಿ ಅಲ್ಲದೆ ತಮಿಳುನಾಡು, ಆಂಧ್ರ ಪ್ರದೇಶದ ಕೆಲವು ಭಾಗಗಳಲ್ಲಿ ವಿದ್ಯುತ್ ಸರಬರಾಜು ಅಸ್ತವ್ಯಸ್ತವಾಯಿತು. ಗ್ರಿಡ್ ಅಸ್ತವ್ಯಸ್ತಗೊಳ್ಳುವಿಕೆ, ಮುಖ್ಯ ಕಾರಣ ಆಂಧ್ರ ಪ್ರದೇಶವು ತನ್ನ ಪಾಲಿಗೂ ಮೀರಿ, ಕೇಂದ್ರ ಉತ್ಪಾದನಾ ಯೋಜನೆಗಳಿಂದ ವಿದ್ಯುತ್ತನ್ನು ತೆಗೆದುಕೊಳ್ಳುತ್ತಿರುವುದು, ಹೆಚ್ಚಿನ ಪ್ರಮಾಣದ ಇಂಡಕ್ಟೀವ್ (Inductive load) ಲೋಡನಿಂದಾಗಿ.